# ಎರಡು ಪ್ರಲೋಭನೆಗಳು

**ಕೆ.ಆರ್. ಮೋಹನ್**

ಶ್ರೀರಾಮಕೃಷ್ಣರ ಜೀವನದ ಎರಡು ಪ್ರಮುಖ ಘಟನೆಗಳನ್ನು ವಿಶ್ಲೇಷಣೆ ಮಾಡಿ ಸ್ವಾರಸ್ಯಕರವಾಗಿ ಪ್ರಸ್ತುತ ಪಡಿಸಿರುವ ಲೇಖಕರು ಮೈಸೂರಿನ ನಿವಾಸಿಗಳು. ಹಲವಾರು ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿರುತ್ತಾರೆ.

ಶ್ರೀರಾಮಕೃಷ್ಣರಿಗೆ ಒಮ್ಮೆ ಅವರ ಭಕ್ತ, ಲಕ್ಷ್ಮೀನಾರಾಯಣ ಮಾರವಾಡಿ ಹತ್ತುಸಾವಿರ ರೂಪಾಯಿಗಳನ್ನು ಕಾಣಿಕೆಯಾಗಿ ಕೊಡಲು ಬಂದ. ಸಂಪೂರ್ಣ ತ್ಯಾಗಿಗಳಾದ ಶ್ರೀರಾಮಕೃಷ್ಣರು ಅದನ್ನು ನಿರಾಕರಿಸಿದಾಗ ಆತ ಶ್ರೀಮಾತೆಯವರಿಗೆ ಆ ಹಣವನ್ನು ತೆಗೆದುಕೊಳ್ಳಲು ವಿನಂತಿಸಿದ. "ನಾನು ತೆಗೆದು ಕೊಂಡರೆ ಶ್ರೀರಾಮಕೃಷ್ಣರೇ ತೆಗೆದುಕೊಂಡ ಹಾಗಾಗುವುದು" ಎಂದು ಅವರೂ ನಿರಾಕರಿಸಿದರು. ದಿವ್ಯದಂಪತಿಗಳಿಬ್ಬರೂ ಪ್ರಾಪಂಚಿಕ ಆಮಿಷಗಳಿಂದ ಹೇಗೆ ಮುಕ್ತರಾಗಿದ್ದರು ಎಂಬುದನ್ನು ಈ ಘಟನೆ ನಿರೂಪಿಸುತ್ತದೆ.

ಇವತ್ತು ಹತ್ತು ಸಾವಿರ ರೂಪಾಯಿ ದೊಡ್ಡ ಮೊತ್ತವಲ್ಲ. ಏಕೆಂದರೆ ಒಬ್ಬ ಬ್ಯಾಂಕ್ ಗುಮಾಸ್ತ ಅಥವಾ ಉಪಾಧ್ಯಾಯ ಒಂದು ತಿಂಗಳ ಸಂಬಳವಾಗಿ ಅದಕ್ಕೂ ಹೆಚ್ಚು ಮೊತ್ತವನ್ನು ಪಡೆಯುತ್ತಾನೆ. ಇದೇನೂ ಭಾರಿ ಪ್ರಲೋಭನೆ ಎನ್ನಿಸದು! ೧೮೮೦ರಲ್ಲಿ ರೂಪಾಯಿಗೆ ಇದ್ದ ಮೌಲ್ಯ ಹಾಗೂ ಇಂದು ಇರುವ ಮೌಲ್ಯದ ನಡುವಿನ ಅಂತರವನ್ನು ಲೆಕ್ಕಹಾಕಿದಾಗ ಈ ಪ್ರಲೋಭನೆಯ ಬೃಹತ್ತು ತಿಳಿಯುತ್ತದೆ. ಬಹಳ ಹಿಂದಿನಿಂದಲೂ ಚಿನ್ನವನ್ನು ಹಣದ ಮಾಪಕವನ್ನಾಗಿ ಬಳಸುತ್ತಿದ್ದಾರೆ. ಹಲವಾರು ಸರ್ಕಾರಿ ಕಡತ ಹಾಗೂ ಗೆಜೆಟಿಯರ್(ವಿಷಯಕೋಶ)ಗಳನ್ನು ಪರಿಶೀಲಿಸಿದಾಗ, ಬಿ. ಎಲ್. ರೈಸ್ ಸಂಪಾದಿಸಿದ ಮೈಸೂರು ಗೆಜೆಟಿಯರ್ ಸಂಪುಟ ೧, ಪುಟ. ೫೨೮ರಲ್ಲಿರುವಂತೆ ೧೮೮೦ರಲ್ಲಿ ಒಂದು ಔನ್ಸ್ ಚಿನ್ನದ ಬೆಲೆ ರೂ.೫೫ ಇತ್ತು. ಇಂದು (೧೦.೨.೨೦೦೬) ಒಂದು ಔನ್ಸ್ ಚಿನ್ನಕ್ಕೆ ರೂ.೨೫,೨೦೦/-, ಅಂದರೆ ಸುಮಾರು ೪೫೮ ಪಟ್ಟು ಹೆಚ್ಚಾಗಿದೆ. ಹೀಗಾಗಿ ಲಕ್ಷ್ಮೀನಾರಾಯಣ ಮಾರವಾಡಿಯ ಕಾಣಿಕೆಯ ಇಂದಿನ ಬೆಲೆ ರೂ.೪೫,೮೧,೮೧೮ ಅಂದರೆ ಸುಮಾರು ೪೬ ಲಕ್ಷ ರೂ. ಇಷ್ಟು ದೊಡ್ಡ ಮೊತ್ತದ ಕಾಣಿಕೆಯನ್ನು ನಿರಾಕರಿಸಿದುದು ಶ್ರೀಮಾತೆ ಹಾಗೂ ಶ್ರೀರಾಮಕೃಷ್ಣರ ತ್ಯಾಗದ ಪರಾಕಾಷ್ಠೆಯನ್ನು ಸೂಚಿಸುತ್ತದೆ.

ಈ ಘಟನೆಗೆ ಪೂರಕವಾಗಿ ಇನ್ನೊಂದು ಸನ್ನಿವೇಶವನ್ನು ಉಲ್ಲೇಖಿಸಬಹುದು. ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿದ್ದಾಗ ಅವರ ತಾಯಿ ಚಂದ್ರಮಣಿ ದೇವಿಯವರು ಅಲ್ಲಿಗೆ ಬಂದು ನೆಲೆಸಿದ್ದರು. ಶ್ರೀರಾಮಕೃಷ್ಣ ಪರಮಹಂಸರ ಲೌಕಿಕ ಅಗತ್ಯಗಳೆಲ್ಲವನ್ನು ಅತಿಶಯ ಭಕ್ತಿ, ಶ್ರದ್ಧೆಗಳಿಂದ ಪೂರೈಸುತ್ತಿದ್ದ ದೇವಸ್ಥಾನದ ಮೇಲ್ವಿಚಾರಕ ಮಥುರನಾಥ ವಿಶ್ವಾಸನಿಗೆ ಅಜ್ಜಿಯನ್ನು ಕಂಡರೆ ತುಂಬ ಆದರ. ಶ್ರೀರಾಮಕೃಷ್ಣರ ಭವಿಷ್ಯ ಕ್ಷೇಮದ ಬಗ್ಗೆ ಚಿಂತಿಸಿ, ಅವರ ಸೋದರಳಿಯ ಹೃದಯ ರಾಮನೊಡನೆ ಗುಟ್ಟಾಗಿ ಪ್ರಸ್ತಾಪ ಮಾಡಿ ಒಂದು ಆಸ್ತಿಯನ್ನು ಕೊಡಬೇಕೆಂದಿದ್ದ. ಈ ವಿಚಾರ ತಿಳಿದೊಡನೆ ಶ್ರೀರಾಮಕೃಷ್ಣರು ಕೋಪಗೊಂಡು "ದುಷ್ಟ! ನನ್ನನ್ನು ಒಬ್ಬ ಸಾಂಸಾರಿಕ ಮನುಷ್ಯನನ್ನಾಗಿ ಮಾಡಲು ಹೊರಟಿದ್ದೀಯಾ!" ಎಂದು ಹೊಡೆಯಲು ಹೋಗಿದ್ದರು. ಆಗ ಆ ವಿಷಯ ಕೈಬಿಟ್ಟರೂ, ಮಥುರ, ಚಂದ್ರಮಣಿದೇವಿಯವರನ್ನು "ಅಜ್ಜಿ ಅಜ್ಜಿ" ಎಂದು ಆಪ್ತವಾಗಿ ಕರೆಯುತ್ತ ದಿನವೂ ಮಾತನಾಡಿಸುತ್ತ ಅವರ ವಿಶ್ವಾಸವನ್ನು ಸಂಪಾದಿಸಿದ. ಒಂದು ದಿನ ಅವಕಾಶವಾದಾಗ, "ಅಜ್ಜಿ, ನೀವು ನನ್ನಿಂದ ಯಾವುದೇ ವಿಧವಾದ ಸೇವೆಯನ್ನೂ ಸ್ವೀಕರಿಸಿಲ್ಲ. ನನ್ನನ್ನು ನಿಮ್ಮವನೇ ಎಂದು ಭಾವಿಸಿದ್ದರೆ ನಿಮಗೆ ಬೇಕಾದುದನ್ನು ಕೇಳಿ" ಎಂದು ಪೀಡಿಸಿದ. ಅಮಾಯಕ ಚಂದ್ರಮಣಿ ದೇವಿಗೆ ಎಷ್ಟು ಯೋಚನೆ ಮಾಡಿದರೂ, ಏನು ಕೇಳಬೇಕೆಂದು ತೋಚದಾಯಿತು! ಕೊನೆಗೆ "ಮಗು, ನಿನ್ನ ಔದಾರ್ಯದಿಂದ ನನಗೆ ಯಾವುದರ ಕೊರತೆಯೂ ಇಲ್ಲ. ಏನಾದರೂ ಬೇಕಾದಾಗ ನಿನ್ನನ್ನು ಕೇಳುತ್ತೇನೆ" ಎಂದರು. ತಮ್ಮ ಪೆಟ್ಟಿಗೆಯನ್ನು ತೆರೆದು "ನೋಡು, ಉಡಲು ಬೇಕಾದಷ್ಟು ಬಟ್ಟೆಗಳಿವೆ. ನಿನ್ನ ಪ್ರೀತಿಯಿಂದಾಗಿ ಉಣ್ಣಲು ಕೊರತೆಯಿಲ್ಲ. ಎಲ್ಲ ವ್ಯವಸ್ಥೆಗಳನ್ನೂ ಚೆನ್ನಾಗಿ ಮಾಡಿರುವೆ. ನನಗೆ ಇನ್ನೇನು ತಾನೇ ಬೇಕಾಗಿದೆ?" ಎಂದು ಸುಮ್ಮನಾದರು. ಆದರೆ ಮಥುರನು ಸುಮ್ಮನಾಗದೆ ತಾನು ಏನಾದರೂ ಕೊಡಲೇಬೇಕೆಂದು ಪದೇ ಪದೇ ಆಗ್ರಹ ಮಾಡಿದ. ಆಗ ಚಂದ್ರಮಣಿದೇವಿಯವರಿಗೆ ತಮಗೆ ಏನು ಬೇಕಿತ್ತೆಂದು ನೆನಪಾಯಿತು. ನಸುನಗುತ್ತ, "ಮಗು, ನೀನು ನನಗೆ ಏನಾದರೂ ಕೊಡಲೇಬೇಕೆಂದಿದ್ದರೆ, ಒಂದಾಣೆಯಷ್ಟು ಹೊಗೆಸೊಪ್ಪನ್ನು ಕೊಂಡುಕೊಡು; ಹಲ್ಲು ಪುಡಿಯನ್ನು ಮಾಡಲು ಅದು ಬೇಕಾಗಿದೆ" ಎಂದರು. ಆಸ್ತಿ, ಜಮೀನು, ಒಡವೆ ಅಥವಾ ಹಣವನ್ನೇ ಕೊಡಬಯಸಿದ್ದ ಮಥುರನಿಗೆ ಶ್ರೀರಾಮಕೃಷ್ಣರ ತಾಯಿ— ಅಜ್ಜಿಯ— ಈ ಅತಿ ಸಣ್ಣ ಆಸೆಯನ್ನು ಕೇಳಿ ಅಳು ಬಂತು. "ಸರ್ವಸಂಗ-ಪರಿತ್ಯಾಗಿ ಮಗನನ್ನು ಪಡೆಯಲು ನಿಮ್ಮಂತಹ ತಾಯಿಗೆ ಮಾತ್ರವೇ ಸಾಧ್ಯ" ಎಂದು ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡಿ ಹೊಗೆಸೊಪ್ಪನ್ನು ತರಿಸಿಕೊಟ್ಟ..